**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

**कर्नाटक–संस्कृत–विश्वविद्यालय:**
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

## ೧೮.೦೧.೨೦೧೩ರಂದು ನಡೆದ 'ಹಣಕಾಸು ಸಮಿತಿ' ೮ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಹಣಕಾಸು ಸಮಿತಿಯ ೮ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಜನವರಿ ೧೮, ೨೦೧೩ರ ಶುಕ್ರವಾರ ಬೆಳಿಗ್ಗೆ ೧೧.೦೦ ಗಂಟೆಗೆ ಬಹುಮಹಡಿ ಕಟ್ಟಡದ ಎರಡನೇ ಮಹಡಿಯಲ್ಲಿರುವ ಕೊಠಡಿ ಸಂಖ್ಯೆ 252ರಲ್ಲಿ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | | |
|---|---|---|
| 1. | **ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ,** ಕುಲಪತಿಗಳು | ಅಧ್ಯಕ್ಷರು |
| 2. | **ಶ್ರೀ ಬಿ.ಎಸ್. ಜಾಪಾಲಿ,** ಉಪ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| 3. | **ಪ್ರೊ. ಎನ್. ಅಶ್ವತ್ಥಮ್ಮ,** ಪ್ರಶಾಸನ ಸಭೆ ಸದಸ್ಯರು | ಸದಸ್ಯರು |
| 4. | **ವಿದ್ವಾನ್ ಸಿ. ನಂಜುಂಡಯ್ಯ,** ಪ್ರಶಿಕ್ಷಣ ಪರಿಷತ್ ಸದಸ್ಯರು | ಸದಸ್ಯರು |
| 5. | **ವಿದ್ವಾನ್ ಪಿ.ಆರ್. ಪಾಗೋಜಿ,** ಹಣಕಾಸು ಅಧಿಕಾರಿಗಳು | ಸದಸ್ಯ ಕಾರ್ಯದರ್ಶಿ |

**ಗೈರುಹಾಜರಿ:**

| | | |
|---|---|---|
| 1. | **ಅಪರ ಮುಖ್ಯ ಕಾರ್ಯದರ್ಶಿಗಳು,** ಆರ್ಥಿಕ ಇಲಾಖೆ, ಬೆಂಗಳೂರು | ಸದಸ್ಯರು |

ಸಭೆಯ ಪ್ರಾರಂಭಕ್ಕೆ ಮಾನ್ಯ ಕುಲಪತಿಗಳು ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಅನಂತರ ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

**ವಿಷಯ 1: ಪ್ರಾಧ್ಯಾಪಕರು, ಸಹಪ್ರಾಧ್ಯಾಪಕರು, ಸಹಾಯಕ ಪ್ರಾಧ್ಯಾಪಕರು ಮತ್ತು ಗ್ರಂಥಪಾಲಕರ ಸಂದರ್ಶನಕ್ಕೆ ಸಂಬಂಧಿಸಿದ ಪರಿನಿಯಮ ಅನುಮೋದನೆ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **'ಪ್ರಾಧ್ಯಾಪಕರು, ಸಹಪ್ರಾಧ್ಯಾಪಕರು, ಸಹಾಯಕ ಪ್ರಾಧ್ಯಾಪಕರು, ಗ್ರಂಥಪಾಲಕರು, ಉಪ ಗ್ರಂಥಪಾಲಕರು ಮತ್ತು ಸಹಾಯಕ ಗ್ರಂಥಪಾಲಕರ ನೇಮಕಾತಿಯ ಪರಿನಿಯಮ–2013'** ಇದಕ್ಕೆ ಸಂಬಂಧಿಸಿದಂತೆ ನಿಯಮಾವಳಿಯನ್ನು ಸಿದ್ಧಪಡಿಸಲಾಗಿದ್ದು, ಈ ಪರಿನಿಯಮವನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಪ್ರಶಾಸನ ಸಮಿತಿಯ ೮ನೇ ಸಭೆಯ ವಿಷಯ ಸಂಖ್ಯೆ ೪ರಲ್ಲಿ ಅನುಮೋದನೆ ಪಡೆಯಲಾಗಿದ್ದು, ಘನತೆವೆತ್ತ ರಾಜ್ಯಪಾಲರ ಅನುಮೋದನೆಗಾಗಿ ಕಳುಹಿಸಲಾಗಿದೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧಿನಿಯಮ 2009ರ ಅಧ್ಯಾಯ 5ರ ಪರಿಚ್ಛೇದ 39(5)ರ ಅನುಸಾರ ಹಣಕಾಸು ಸಮಿತಿಯ ಅನುಮೋದನೆಗಾಗಿ ಸಭೆಯ ಮುಂದೆ ಇರಿಸಿದೆ.

ನಿರ್ಣಯ: **ಸಭೆಯು ಪರಿನಿಯಮವನ್ನು ಪರಿಶೀಲಿಸಿ ಅನುಮೋದನೆಯನ್ನು ನೀಡಿತು.**

**ವಿಷಯ 2: 2013–14ನೇ ಸಾಲಿನಿಂದ ಆರಂಭಿಸಲು ತೀರ್ಮಾನಿಸಿರುವ ಸಂಸ್ಕೃತ ಅನೌಪಚಾರಿಕ ಶಿಕ್ಷಣ ತರಗತಿಗಳನ್ನು ಆರಂಭಿಸಲು ಸಿದ್ಧಪಡಿಸಿದ ಪರಿನಿಯಮ ಅನುಮೋದನೆ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ರಾಜ್ಯದ IGNOU/KSOU ಮಾದರಿಯಲ್ಲಿ ಎಲ್ಲಾ ಸಂಸ್ಕೃತಾಭಿಮಾನಿಗಳಿಗೆ ಲಭ್ಯವಾಗುವಂತೆ ದೂರ–ಬಾಹ್ಯ–ಮುಕ್ತ ಅನೌಪಚಾರಿಕ ಶಿಕ್ಷಣ ಕಾರ್ಯಕ್ರಮಗಳನ್ನು 2013–14ನೇ ಸಾಲಿನಿಂದ ಆರಂಭಿಸಲು ಉದ್ದೇಶಿಸಿದೆ. ಈ ಶಿಕ್ಷಣಕ್ಕೆ ಸಂಬಂಧಿಸಿದಂತೆ **'ಅನೌಪಚಾರಿಕ ಶಿಕ್ಷಣ ಪರಿನಿಯಮ – 2013'** ಅನ್ನು ಸಿದ್ಧಪಡಿಸಲಾಗಿದ್ದು, ಈ ಪರಿನಿಯಮವನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಪ್ರಶಾಸನ ಸಮಿತಿಯ ೮ನೇ ಸಭೆಯ ವಿಷಯ ಸಂಖ್ಯೆ ೫ರಲ್ಲಿ ಅನುಮೋದನೆ ಪಡೆಯಲಾಗಿದ್ದು, ಘನತೆವೆತ್ತ ರಾಜ್ಯಪಾಲರ ಅನುಮೋದನೆಗಾಗಿ ಕಳುಹಿಸಲಾಗಿದೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧಿನಿಯಮ 2009ರ ಅಧ್ಯಾಯ 5ರ ಪರಿಚ್ಛೇದ 39(5)ರ ಅನುಸಾರ ಹಣಕಾಸು ಸಮಿತಿಯ ಅನುಮೋದನೆಗಾಗಿ ಸಭೆಯ ಮುಂದೆ ಇರಿಸಿದೆ.

ನಿರ್ಣಯ: **ಸಭೆಯು ಪರಿನಿಯಮವನ್ನು ಪರಿಶೀಲಿಸಿ ಅನುಮೋದನೆಯನ್ನು ನೀಡಿತು.**

**ವಿಷಯ 3: ಜ್ಯೋತಿಷ್ಯ ಸರ್ಟಿಫಿಕೇಟ್ ಹಾಗೂ ಡಿಪ್ಲೋಮಾ ತರಗತಿಗಳನ್ನು ಆರಂಭಿಸಲು ಸಿದ್ಧಪಡಿಸಿದ ಪರಿನಿಯಮ ಅನುಮೋದನೆ ಬಗೆಗೆ.**

ಟಿಪ್ಪಣಿ: ದಿನಾಂಕ 30.06.2012 ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ ನಿರ್ಣಯದಂತೆ ದಿನಾಂಕ 27.07.2012 ರಂದು ನಡೆದ ಉಪಸಮಿತಿ ಸಭೆಯ ಪ್ರಮುಖ ಅಂಶಗಳು ಹೀಗಿವೆ: 1. ಆರು ತಿಂಗಳ ಅವಧಿಯ ಪ್ರಾಮಾಣಿಕ ಶಿಕ್ಷಣ (Certificate Course); 2. ಒಂದು ವರ್ಷದ ಪ್ರಾಯೋಗಿಕ ಶಿಕ್ಷಣ (Diploma Course); 3. ಮುಂದಿನ ದಿನಗಳಲ್ಲಿ ಯು.ಜಿ. ಮತ್ತು ಪಿ.ಜಿ.

ಕೋರ್ಸ್; 4. ಪಾಠ್ಯಕ್ರಮಗಳ ಏಕರೂಪತೆ; 5. ಶುಲ್ಕ, ಪ್ರವೇಶನಿಯಮ, ಅಧ್ಯಯನ ಕೇಂದ್ರಗಳಲ್ಲಿ ಏಕರೂಪತೆ –ಈ ಎಲ್ಲಾ ಅಂಶಗಳಿಗೆ ಸಂಬಂಧಿಸಿದಂತೆ ಪರಿನಿಯಮಗಳನ್ನು ರಚಿಸಿ ಶಿಕ್ಷಣಕ್ಕೆ ಅವಕಾಶ ಕಲ್ಪಿಸುವುದು. ಈ ಶಿಕ್ಷಣವನ್ನು 2013–14ನೇ ಸಾಲಿನಿಂದ ಜಾರಿಗೆ ತರುವುದು. ಮೇಲ್ಕಂಡ ಈ ಎಲ್ಲಾ ಅಂಶಗಳನ್ನು ಸಭೆಯು ಚರ್ಚಿಸಿ, ಸೂಕ್ತ ಪ್ರಾಧಿಕಾರಗಳಿಂದ ಅನುಮತಿ ಪಡೆಯುವ ಮೂಲಕ ಮುಂದಿನ ಕ್ರಮವನ್ನು ಜರುಗಿಸಲು ಸಭೆಯು ತೀರ್ಮಾನಿಸಿದೆ.

ಈ ಪರಿನಿಯಮವನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಪ್ರಶಾಸನ ಸಮಿತಿಯ 6ನೇ ಸಭೆಯ ವಿಷಯ ಸಂಖ್ಯೆ 5ರಲ್ಲಿ ಅನುಮೋದನೆ ಪಡೆಯಲಾಗಿದ್ದು, ಘನತೆವೆತ್ತ ರಾಜ್ಯಪಾಲರ ಅನುಮೋದನೆಗಾಗಿ ಕಳುಹಿಸಲಾಗಿದೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧಿನಿಯಮ 2009ರ ಅಧ್ಯಾಯ 5ರ ಪರಿಚ್ಛೇದ 39(5)ರ ಅನುಸಾರ ಹಣಕಾಸು ಸಮಿತಿಯ ಅನುಮೋದನೆಗಾಗಿ ಸಭೆಯ ಮುಂದೆ ಇರಿಸಿದೆ.

ನಿರ್ಣಯ: **ಸಭೆಯು ಪರಿನಿಯಮವನ್ನು ಪರಿಶೀಲಿಸಿ ಅನುಮೋದನೆಯನ್ನು ನೀಡಿತು.**

**ವಿಷಯ 4: ವಿಶ್ವವಿದ್ಯಾಲಯ ಅನುದಾನ ಆಯೋಗಕ್ಕೆ (ಯು.ಜಿ.ಸಿ) ಪ್ರಸ್ತಾವನೆ ಸಲ್ಲಿಸುವ ಬಗೆಗೆ.**

ಟಿಪ್ಪಣಿ: ವಿಶ್ವವಿದ್ಯಾಲಯ ಅನುದಾನ ಆಯೋಗ(ಯು.ಜಿ.ಸಿ)ವು ನೂತನವಾಗಿ ಪ್ರಾರಂಭಗೊಂಡ ವಿಶ್ವವಿದ್ಯಾಲಯಗಳಿಗೆ **'One Time Catch up Grant'** ಅಡಿ ರೂ. 5 ಕೋಟಿ ಧನಸಹಾಯ ನೀಡುತ್ತದೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2010ರಲ್ಲಿ ಅಸ್ತಿತ್ವಕ್ಕೆ ಬಂದ ಕಾರಣ ಈ ಅನುದಾನ ಪಡೆಯಲು ಅರ್ಹವಾಗಿರುತ್ತದೆ. ಈ ಅನುದಾನವನ್ನು ಪಡೆಯಲು ಸೂಕ್ತ ಪ್ರಸ್ತಾವನೆಯನ್ನು ಸಿದ್ಧಪಡಿಸಲಾಗಿದ್ದು, ವಿಶ್ವವಿದ್ಯಾಲಯ ಅನುದಾನ ಆಯೋಗಕ್ಕೆ ಕಳುಹಿಸಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಪ್ರಶಾಸನ ಸಮಿತಿಯ 11ನೇ ಸಭೆಯ ವಿಷಯ ಸಂಖ್ಯೆ 3ರಲ್ಲಿ ಅನುಮೋದನೆ ಪಡೆಯಲಾಗಿದೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧಿನಿಯಮ 2009ರ ಅಧ್ಯಾಯ 5ರ ಪರಿಚ್ಛೇದ 39(5)ರ ಅನುಸಾರ ಹಣಕಾಸು ಸಮಿತಿಯ ಅನುಮೋದನೆಗಾಗಿ ಸಭೆಯ ಮುಂದೆ ಇರಿಸಿದೆ.

ನಿರ್ಣಯ: **ವಿಶ್ವವಿದ್ಯಾಲಯ ಅನುದಾನ ಆಯೋಗಕ್ಕೆ ಸದರಿ ಪ್ರಸ್ತಾವನೆಯನ್ನು ಸಲ್ಲಿಸುವುದಕ್ಕೆ ಸಭೆಯು ಅನುಮೋದನೆಯನ್ನು ನೀಡಿತು.**

**ವಿಷಯ 5: ಘಟಕ ಕಾಲೇಜುಗಳ ಬೋಧಕ–ಬೋಧಕೇತರ ಸಿಬ್ಬಂದಿಗಳ ಸೇವಾವಿಲೀನೀಕರಣ ಪರಿನಿಯಮವನ್ನು ಅನುಮೋದಿಸುವ ಬಗೆಗೆ.**

ಟಿಪ್ಪಣಿ: ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಬೆಂಗಳೂರು ಮತ್ತು ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು–ಈ ಎರಡೂ ಕಾಲೇಜುಗಳನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಘಟಕ ಕಾಲೇಜುಗಳಾಗಿ ವರ್ಗಾಯಿಸಿರುವ ಹಿನ್ನೆಲೆಯಲ್ಲಿ ಈ ಕಾಲೇಜುಗಳ ಬೋಧಕ–ಬೋಧಕೇರ ಸಿಬ್ಬಂದಿಗಳ ಸೇವೆಯನ್ನು ವಿಶ್ವವಿದ್ಯಾಲಯದಲ್ಲಿ ವಿಲೀನಗೊಳಿಸುವ ಸಂಬಂಧವಾಗಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ವಿಧೇಯಕ 2000ದ ಉಪನಿಯಮ 82ರಂತೆ **'ಘಟಕ ಕಾಲೇಜುಗಳ ಸೇವಾವಿಲೀನೀಕರಣ ಪರಿನಿಯಮ–2013'** ಅನ್ನು ಸಿದ್ಧಪಡಿಸಲಾಗಿದ್ದು, ಸಭೆಯ ಅನುಮೋದನೆಗಾಗಿ ಮಂಡಿಸಿದೆ. ಈ ಪರಿನಿಯಮವನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಪ್ರಶಾಸನ ಸಮಿತಿಯ 11ನೇ ಸಭೆಯ, ಅಧ್ಯಕ್ಷರ ಅಪ್ಪಣೆಯ ಮೇರೆಗಿನ ವಿಷಯ ಸಂಖ್ಯೆ 1ರಲ್ಲಿ ಅನುಮೋದನೆ ಪಡೆಯಲಾಗಿದ್ದು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧಿನಿಯಮ 2009ರ ಅಧ್ಯಾಯ 5ರ ಪರಿಚ್ಛೇದ 39(5)ರ ಅನುಸಾರ ಹಣಕಾಸು ಸಮಿತಿಯ ಅನುಮೋದನೆಗಾಗಿ ಸಭೆಯ ಮುಂದೆ ಇರಿಸಿದೆ.

ನಿರ್ಣಯ: **ಸಭೆಯು ಪರಿನಿಯಮವನ್ನು ಸೂಕ್ತ ಕ್ರಮಕ್ಕಾಗಿ ಸರ್ಕಾರದ ಅನುಮೋದನೆಗಾಗಿ ಕಳುಹಿಸಲು ಒಪ್ಪಿಗೆಯನ್ನು ನೀಡಿತು.**

**ವಿಷಯ 6: ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರಿಗೆ ಹೊಸ ವಾಹನವನ್ನು ಖರೀದಿಸುವ ಬಗೆಗೆ.**

ಟಿಪ್ಪಣಿ: ರಾಜ್ಯದಲ್ಲಿರುವ ಅನುದಾನಿತ/ಅನುದಾನರಹಿತ ಪಾಠಶಾಲೆಗಳ ನಿರ್ವಹಣೆಗಾಗಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಡಿಯಲ್ಲಿ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯವನ್ನು ಅಸ್ತಿತ್ವಕ್ಕೆ ತರಲಾಗಿದ್ದು, ನಿರ್ದೇಶನಾಲಯದ ಆಡಳಿತವನ್ನು ಮಾನ್ಯ ನಿರ್ದೇಶಕರು ನೋಡಿಕೊಳ್ಳುತ್ತಿದ್ದಾರೆ. ಇವರು ರಾಜ್ಯಮಟ್ಟದ ಅಧಿಕಾರಿಯಾಗಿದ್ದು, 350ಕ್ಕೂ ಹೆಚ್ಚು ಸಂಸ್ಕೃತ ಪಾಠಶಾಲೆಗಳ ಆಡಳಿತ ಹಾಗೂ ಶೈಕ್ಷಣಿಕ ಕಾರ್ಯಗಳನ್ನು ಪರಿಶೀಲಿಸಲು ರಾಜ್ಯಾದ್ಯಂತ ಸಂಚರಿಸಬೇಕಾಗುವುದು. ಈ ಹಿನ್ನೆಲೆಯಲ್ಲಿ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರಿಗಾಗಿ ನೂತನ ಕಾರನ್ನು ಕೊಂಡುಕೊಳ್ಳಲು ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಲಾಗಿದ್ದು, ರೂ. 6.50 ಲಕ್ಷಕ್ಕೆ (ತೆರಿಗೆಯನ್ನು ಹೊರತುಪಡಿಸಿ) ಅನುಮೋದನೆ ದೊರೆತಿದೆ. ಹಣಕಾಸು ಸಮಿತಿಯ ಅನುಮೋದನೆಗಾಗಿ ಸಭೆಯ ಮುಂದೆ ಇರಿಸಿದೆ.

ನಿರ್ಣಯ: **ನಿರ್ದೇಶಕರಿಗೆ 2011–12ನೇ ಸಾಲಿನ ಅಭಿವೃದ್ಧಿ ಅನುದಾನದ ಮೊತ್ತದಲ್ಲಿ ಹೊಸ ವಾಹನ ಖರೀದಿಸಲು ಸಭೆಯು ತನ್ನ ಒಪ್ಪಿಗೆಯನ್ನು ನೀಡಿತು.**

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು:**

**ವಿಷಯ 1: ಸಂಸ್ಕೃತ ಪಾಠಶಾಲೆ ಮತ್ತು ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರಿಗೆ ತರಬೇತಿ ವೇತನ ಶ್ರೇಣಿಯಲ್ಲಿ ವೇತನ ನಿಗದಿಗೊಳಿಸುವ ಬಗೆಗೆ.**

ಟಿಪ್ಪಣಿ: ಪ್ರಥಮಾ ಮತ್ತು ಕಾವ್ಯ ತರಗತಿಗಳು ನಡೆಯುತ್ತಿರುವ ಸಂಸ್ಕೃತ ಪಾಠಶಾಲೆ ಮತ್ತು ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರು ಯಾವುದಾದರೂ ಶೈಕ್ಷಣಿಕ ತರಬೇತಿ ಹೊಂದಿದ್ದರೆ ಅಂತಹ ಶಿಕ್ಷಕರಿಗೆ ಪ್ರಾಥಮಿಕ ಶಾಲಾ ಶಿಕ್ಷಕರ ವೇತನ ಮತ್ತು

ವೇತನಶ್ರೇಣಿ ನೀಡಲು ಅನುದಾನ ಸಂಹಿತೆಯ ಅಧ್ಯಾಯ 3 ನಿಯಮ 22(7)(ಇ)ಯಲ್ಲಿ ಅವಕಾಶವಿರುವಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯು ತರಬೇತಿ ಹೊಂದಿರುವ ಕೆಲವು ಶಿಕ್ಷಕರಿಗೆ ತರಬೇತಿ ವೇತನ ಮತ್ತು ವೇತನಶ್ರೇಣಿಯನ್ನು ಮಂಜೂರು ಮಾಡಿರುತ್ತದೆ. ಅದರಂತೆ ತರಬೇತಿ ಹೊಂದಿರುವ ಶಿಕ್ಷಕರಿಗೆ ತರಬೇತಿ ವೇತನ ಮತ್ತು ವೇತನ ಶ್ರೇಣಿಯನ್ನು ಮಂಜೂರು ಮಾಡಬಹುದಾಗಿದ್ದು, ಈ ಸಂಬಂಧವಾಗಿ ದಿನಾಂಕ 16.05.2012ರಂದು ನಡೆದ ಪ್ರಶಾಸನ ಸಮಿತಿ 4ನೇ ಸಭೆಯ ನಡಾವಳಿಯಲ್ಲಿ ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಪೂರ್ವೋಕ್ತ ಅನುದಾನ ಸಂಹಿತೆಗೆ ಅನುಗುಣವಾಗಿ ತರಬೇತಿ ಹೊಂದಿರುವ ಶಿಕ್ಷಕರುಗಳಿಗೆ ತರಬೇತಿ ವೇತನ ಮತ್ತು ವೇತನ ಶ್ರೇಣಿ ಮಂಜೂರು ಮಾಡಲು ಅನುಮೋದನೆ ನೀಡಲಾಗಿದೆ. ಈ ವಿಷಯವನ್ನು ಹಣಕಾಸು ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ.

ಒಟ್ಟು 70 ಸಂಸ್ಕೃತ ಪಾಠಶಾಲೆಗಳ 83 ತರಬೇತಿ ಪಡೆದ ಶಿಕ್ಷಕರು ಇದ್ದು ವಿವರ ಕೆಳಕಂಡಂತಿರುತ್ತದೆ.

| ಕ್ರ. ಸಂ. | ಶಾಲೆಯ ಹೆಸರು ಮತ್ತು ವಿಳಾಸ | ಶಿಕ್ಷಕರ ಹೆಸರು | ತರಬೇತಿ ವಿವರ ಮತ್ತು ವರ್ಷ | ಹಾಲಿಪಡೆಯುತ್ತಿರುವ ವೇತನ/ವೇತನಶ್ರೇಣಿ | ತರಬೇತಿ ವೇತನ ಶ್ರೇಣಿಯಲ್ಲಿ ನಿಗದಿಪಡಿಸಿದ ವೇತನ/ವೇತನ ಶ್ರೇಣಿ |
|---|---|---|---|---|---|
| 1. | **ಗಣೇಶ ಸಂಸ್ಕೃತ ಜ್ಯೋತಿಷ್ಯ ಪಾಠಶಾಲೆ** ಕೃಷ್ಣಮೂರ್ತಿಪುರಂ, ಮೈಸೂರು | ನರಸಿಂಹಭಟ್ಟ | ಬಿ.ಇಡಿ 1996 | 21600 14550–26700 | 22200 16000–29600 |
| 2. | **ಸಿದ್ಧಗಂಗಾ ಸಂಸ್ಕೃತ ಪಾಠಶಾಲೆ** ಬ್ಯಾಲಕೆರೆ, ಮಾಗಡಿ ತಾಲ್ಲೂಕು ರಾಮನಗರ ಜಿಲ್ಲೆ | ಆರ್.ಹೆಚ್. ನೀಲಕಂಠಯ್ಯ | ಬಿ.ಇಡಿ 1988 | 24000 14550–26700 | 24600 16000–29600 |
| 3. | **ಮಹಾಂತೇಶ್ವರ ಸಂಸ್ಕೃತ ಪಾಠಶಾಲೆ** ಶ್ರೀವಿರಕ್ತಮಠ, ಹತ್ತಿಮತ್ತೂರು–581118 | ಸಂಗಪ್ಪ ಕತ್ತಿಕೈ | ಟಿ.ಸಿ.ಹೆಚ್ 1988 | 26000 14550–26700 | 26700 16000–29600 |
| 4. | **ಸಂಸ್ಕೃತ ಪಾಠಶಾಲೆ,** ಸಂಸ್ಕೃತಮ್ ಮಾರ್ಗ, ಹಾಸನ–573 201 | ಗಾಯಿತ್ರಿ | ಟಿ.ಸಿ.ಹೆಚ್ 1978 | 24600 14550–26700 | 25300 16000–29600 |
| 5. | **ಕಲ್ಪತರು ಸಂಸ್ಕೃತ ಪಾಠಶಾಲೆ** ಮಾಯಸಂದ್ರ, ತುರುವೇಕೆರೆ ತಾ., ತುಮಕೂರು ಜಿಲ್ಲೆ | ಶಂಕರೇಗೌಡ ಸಿ.ಜೆ. | ಬಿ.ಇಡಿ 1994 | 20500 14550–26700 | 21000 16000–29600 |
| | | ಲೋಕೇಶ ವಿ.ಹೆಚ್. | ಟಿ.ಸಿ.ಹೆಚ್ 2007 | 11600 11600–21000 | 13600 13600–26000 |
| 6. | **ಶಿವಾನುಭವತತ್ವ ಪ್ರಚಾರ ಸಮಿತಿಯ ಸಂಸ್ಕೃತ ಪಾಠಶಾಲೆ** ಹಿರೇಕೆರೂರು, ಹಾವೇರಿ ಜಿಲ್ಲೆ | ಎಸ್.ಆರ್. ಪಿಳಿಗಿಮಠ | ಬಿ.ಇಡಿ 1993 | 19500 14550–26700 | 20000 16000–29600 |
| 7. | **ಸಂಸ್ಕೃತ ವೇದಜ್ಯೋತಿಷ್ಯ ಪಾಠಶಾಲೆ** ಬೀರೂರು–577 116. ಹಾಸನ ಜಿಲ್ಲೆ | ಈಶ್ವರಯ್ಯ ಎಸ್. | ಬಿ.ಇಡಿ 2003 | 16400 12500–24000 | 16800 14550–26700 |
| | | ಶಂಕರ ಮಂಜುನಾಥ ಹೆಬ್ಬಾರ | ಬಿ.ಇಡಿ 1993 | 16400 12500–24000 | 16800 14550–26700 |
| 8. | **ಸಿದ್ಧಿವಿನಾಯಕ ಸಂಸ್ಕೃತ ಪಾಠಶಾಲೆ** ಹಾಳದಕಟ್ಟಾ, ಸಿದ್ದಾಪುರ ತಾ., ಉತ್ತರಕನ್ನಡ ಜಿಲ್ಲೆ. | ನಾರಾಯಣ್ ವೆಂಕಟಸುಬ್ಬಾಭಟ್ | ಬಿ.ಇಡಿ 1990 | 16800 13600–26000 | 17200 14550–26700 |
| 9. | **ಶ್ರೀ ಜಗದ್ಗುರು ರೇಣುಕಾಚಾರ್ಯ ಸಂಸ್ಕೃತ ಪಾಠಶಾಲೆ** ಲಕ್ಷ್ಮೇಶ್ವರ ಶಿರಹಟ್ಟಿ ತಾಲ್ಲೂಕು, ಗದಗ ಜಿಲ್ಲೆ | ಬಿ.ಹೆಚ್. ಸಂಗೂರಮಠ | ಬಿ.ಇಡಿ 1993 | 26000 14550–26700 | 26700 16000–29600 |
| 10. | **ಸಂಸ್ಕೃತ ಪಾಠಶಾಲೆ,** ಶ್ರೀರಾಮದೇವ ಟ್ರಸ್ಟ್ ಮಾಳಮಡ್ಡಿ ಸ್ಟೇಷನ್ ರಸ್ತೆ, ಧಾರವಾಡ | ನಾಗರಾಜಗೋಪಾಲಕೃಷ್ಣ ಭಟ್ಟ | ಶಿಕ್ಷಾಶಾಸ್ತ್ರಿ 1994 | 17650 13600–26000 | 18100 16000–29000 |
| 11. | **ರಾಘವೇಂದ್ರ ಸಂಸ್ಕೃತ ಪಾಠಶಾಲೆ** ಸಾಧನಕೇರಿ, ಧಾರವಾಡ | ಎಸ್.ಜಿ. ಘಟ್ನಟ್ಟಿ | ಬಿ.ಇಡಿ 1992 | 22200 14550–26700 | 22800 16000–29600 |
| 12. | **ಕರ್ನಾಟಕ ವಿದ್ಯಾ ಮತ್ತು ಸಾಂಸ್ಕೃತಿಕ ಸಂಘ ಸಂಸ್ಕೃತ ಪಾಠಶಾಲೆ,** ಪಿ.ಜಿ.ಹಳ್ಳಿ ಮಲ್ಲೇಶ್ವರಂ, ಬೆಂಗಳೂರು. | ತ್ಯಾಗರಾಜ | ಬಿ.ಇಡಿ 1994 | 13600 11600–21000 | 13900 13600–26000 |
| 13. | **ಸ್ವರ್ಣಾಂಬ ಸಂಸ್ಕೃತ ಪಾಠಶಾಲೆ** ಶಿವಗಂಗೆ ನೆಲಮಂಗಲ ತಾ। ಬೆಂಗಳೂರು ಗ್ರಾಮಾಂತರ ಜಿಲ್ಲೆ | ವಿರೂಪಾಕ್ಷಯ್ಯ ಎಸ್. | ಟಿ.ಸಿ.ಹೆಚ್ 1976 | 26000 14550–26700 | 26700 16000–29600 |
| | | ಶೋಭ ಡಿ.ಸಿ. | ಬಿ.ಇಡಿ 2007 | 11600 11600–21000 | 13600 13600–26000 |
| 14. | **ಭಾರತಿ ಸಂಸ್ಕೃತ ಪಾಠಶಾಲೆ** ಭೈರುಂಬೆ, ಸಿರ್ಸಿ ತಾ।, ಉತ್ತರಕನ್ನಡ ಜಿಲ್ಲೆ. | ಕೃಷ್ಣಮೂರ್ತಿ ಹೆಗಡೆ | ಬಿ.ಇಡಿ 2006 | 11600 11600–21000 | 13600 13600–26000 |
| 15. | **ರುದ್ರೇಶ್ವರ ಸಂಸ್ಕೃತ ಪಾಠಶಾಲೆ** ಹೊಸಕೆರೆ, ಕುಣಿಗಲ್ ತಾ., ತುಮಕೂರು ಜಿಲ್ಲೆ. | ರುದ್ರಕುಮಾರ್ ಎನ್.ಎಸ್. | ಬಿ.ಇಡಿ 2003 | 16400 12500–24000 | 16800 13600–26000 |
| 16. | **ಸಂಸ್ಕೃತ ಪಾಠಶಾಲೆ** ಮತ್ತೂರು, ಶಿವಮೊಗ್ಗ ತಾಲ್ಲೂಕು | ರಾಮಚಂದ್ರಪ್ಪ ಕೆ.ಹೆಚ್. | ಬಿ.ಇಡಿ 2012 | 11600 11600–21000 | 13600 13600–26000 |

| | | | | | |
|---|---|---|---|---|---|
| 17. | **ಗುರುಕುಲ ಸಂಸ್ಕೃತ ಪಾಠಶಾಲೆ** ಮಹೇಂದ್ರಕರಚಾಳ, ಧಾರವಾಡ–08. | ಎಸ್.ವಿ.ವಸ್ತ್ರದ | ಬಿ.ಇಡಿ<br>1994 | 16800<br>12500–24000 | 17200<br>14550–26700 |
| | | ಬಿ.ಎ.ಆಶೆಟ್ಟಿ | ಬಿ.ಇ.ಡಿ<br>1993 | 16000<br>12500–24000 | 16400<br>14550–26700 |
| 18. | **ಮಹಾಲಿಂಗೇಶ್ವರ ಸಂಸ್ಕೃತ ಪಾಠಶಾಲೆ** ನೆಲಮಂಗಲ,<br>ಬೆಂಗಳೂರು ಗ್ರಾಮಾಂತರ ಜಿಲ್ಲೆ. | ಎಂ.ಆರ್.ವೀರಪ್ಪಾಜಿ | ಬಿ.ಇ.ಡಿ<br>1996 | 22200<br>16000–29600 | 22800<br>16000–29600 |
| | | ಮೃತ್ಯುಂಜಯ ಆರ್. | ಬಿ.ಇ.ಡಿ<br>1996 | 21600<br>14550–26700 | 22200<br>14000–29600 |
| 19. | **ಫಲಾಹಾರ ಪ್ರಭುದೇವಸ್ವಾಮಿ ಸಂಸ್ಕೃತ ಪಾಠಶಾಲೆ,** ಬಂಡಳ್ಳಿ, ಕೊಳ್ಳೇಗಾಲ ತಾ॥ ಚಾಮರಾಜನಗರಜಿಲ್ಲೆ. | ಪರಮಶಿವಮೂರ್ತಿ | ಬಿ.ಇಡಿ<br>2004 | 19500<br>14550–26700 | 20000<br>16000–29600 |
| | | ಕೆಂಡಗಣ್ಣಮೂರ್ತಿ | ಬಿ.ಇಡಿ<br>2004 | 16800<br>13600–26000 | 17200<br>14550–26700 |
| 20. | **ಭಾರತೀಯ ಸಂಸ್ಕೃತಿ ವಿದ್ಯಾಪೀಠ, ಸಂಸ್ಕೃತ ಪಾಠಶಾಲೆ**<br>ಚಾಮರಾಜಪೇಟೆ ಬೆಂಗಳೂರು–18. | ವೆಂಕಟನರಸಿಂಹಾಚಾರ್ಯ | ಬಿ.ಇಡಿ<br>1999 | 14550<br>12500–24000 | 14900<br>14550–26700 |
| 21. | **ಆದಿಚುಂಚನಗಿರಿ ಸಂಸ್ಕೃತ ಪಾಠಶಾಲೆ**<br>ಚುಂಚನಕಟ್ಟೆ, ಕೆ.ಆರ್.ನಗರ ತಾಲ್ಲೂಕು ಮೈಸೂರು ಜಿಲ್ಲೆ. | ಎ. ಜವರೇಗೌಡ | ಬಿ.ಇಡಿ<br>1993 | 24000<br>14550–26700 | 24600<br>16000–29600 |
| 22. | **ರಾಮೇಶ್ವರ ಸಂಸ್ಕೃತ ಪಾಠಶಾಲೆ**<br>ಮುಳುಕುಂಟೆ, ತುಮಕೂರು ತಾಲ್ಲೂಕು | ಮಾಲತಿ ಎಂ.ಎಲ್. | ಬಿ.ಇಡಿ<br>1993 | 24000<br>14550–26700 | 24600<br>16000–29600 |
| 23. | **ಬಾಪೂಜಿ ಸಂಸ್ಕೃತ ಪಾಠಶಾಲೆ**<br>ಶಾರದಾದೇವಿನಗರ, ತುಮಕೂರು | ಸೂರ್ಯಪ್ರಕಾಶ್ ಜಿ. | ಬಿ.ಇಡಿ<br>1995 | 22800<br>14550–26700 | 23400<br>16000–29600 |
| 24. | **ಸಿದ್ಧಗಂಗಾ ಸಂಸ್ಕೃತ ಪಾಠಶಾಲೆ**<br>ಹಾಲನೂರು, ತುಮಕೂರು ತಾಲ್ಲೂಕು | ಎಸ್.ಡಿ. ರೇಣುಕಪ್ರಸಾದ್ | ಬಿ.ಇಡಿ<br>1995 | 25300<br>14550–26700 | 26000<br>16000–29600 |
| | | ಗೌರಿಶಂಕರಯ್ಯ | ಬಿ.ಇಡಿ<br>1994 | 22200<br>14550–26700 | 22800<br>16000–29600 |
| 25. | **ಶಿವಕುಮಾರಸ್ವಾಮಿ ಸಂಸ್ಕೃತ ಪಾಠಶಾಲೆ**<br>ಚೇಳೂರು, ಗುಬ್ಬಿ ತಾ.,<br>ತುಮಕೂರು ಜಿಲ್ಲೆ | ತಿಪ್ಪಯ್ಯ ಬಿ.ಸಿ. | ಬಿ.ಇಡಿ<br>1987 | 16800<br>14550–26700 | 17200<br>16000–29600 |
| 26. | **ಮಲ್ಲಿಕಾರ್ಜುನಸ್ವಾಮಿ ಸಂಸ್ಕೃತ ಪಾಠಶಾಲೆ** ಮತ್ತಿಘಟ್ಟ,<br>ತುಮಕೂರು ಜಿಲ್ಲೆ. | ರಾಜಶೇಖರಪ್ಪ ಎಂ. | ಬಿ.ಇಡಿ<br>1989 | 26000<br>14550–26700 | 26700<br>16000–29600 |
| 27. | **ಹಿರೇಮಠವಿದ್ಯಾಪೀಠ ಸಂಸ್ಕೃತ ಪಾಠಶಾಲೆ** ಬಾಪೂಜಿ ನಗರ,<br>ಕೂಡ್ಲಿಗಿ–583 135 | ವಿಶಾಲಾಕ್ಷಿ ವಿ. ದೇಶಪಾಂಡೆ | ಬಿ.ಇಡಿ<br>1992 | 22200<br>14550–26700 | 22800<br>16000–29600 |
| 28. | **ಮನೋನ್ಮಣಿ ಸಂಸ್ಕೃತ ಪಾಠಶಾಲೆ**<br>ಬಸವನಗುಡಿ, ಬೆಂಗಳೂರು–04. | ಟಿ.ಸಿ. ಅಶ್ವತ್ಥಕುಮಾರ್ | ಬಿ.ಇಡಿ<br>1995 | 26000<br>14550–26700 | 26700<br>16000–29600 |
| 29. | **ಸಂಸ್ಕೃತ ಪಾಠಶಾಲೆ**<br>ಕೇಡಲಸರ, ಸಾಗರ ತಾಲ್ಲೂಕು. | ನಾಗಭೂಷಣ ಎಂ.ಎನ್. | ಬಿ.ಇಡಿ<br>1989 | 26000<br>14550–26700 | 26700<br>16000–29600 |
| 30. | **ಮಹಂತೇಶ್ವರ ಸಂಸ್ಕೃತ ಪಾಠಶಾಲೆ**<br>ಕುದೂರು, ಮಾಗಡಿ ತಾ.,<br>ರಾಮನಗರ ಜಿಲ್ಲೆ | ಸಿ. ಮಹದೇವಯ್ಯ | ಬಿ.ಇಡಿ<br>2000 | 16800<br>13600–26000 | 17200<br>14550–26700 |
| 31. | **ಜಗದ್ಗುರು ದುರದುಂಡೇಶ್ವರ ಸಂಸ್ಕೃತ ಪಾಠಶಾಲೆ,** ನಿಡಸೋಸಿ,<br>ಬೆಳಗಾವಿ ಜಿಲ್ಲೆ | ಸಂಗಯ್ಯ ಚೌಕಿಮಠ | ಬಿ.ಇಡಿ<br>2001 | 21600<br>14550–26700 | 22200<br>16000–29600 |
| 32. | **ತರಳಬಾಳು ಸಂಸ್ಕೃತ ಪಾಠಶಾಲೆ,**<br>ಸಿರಿಗೆರೆ, ಚಿತ್ರದುರ್ಗ ಜಿಲ್ಲೆ | ಶ್ರೀಮತಿ ಕರೇಗೌಡರ್ | ಬಿ.ಇಡಿ<br>1997 | 21600<br>14550–26700 | 22200<br>16000–29600 |
| 33. | **ಮಡಿವಾಳಸ್ವಾಮಿ ಸಂಸ್ಕೃತ ಪಾಠಶಾಲೆ**<br>ರಾಮಾನುಜರಸ್ತೆ, ಮೈಸೂರು–04 | ಸದಾಶಿವಯ್ಯ ಎಂ. | ಬಿ.ಇಡಿ<br>2004 | 16000<br>12500–24000 | 16400<br>14550–26700 |
| 34. | **ಫಿರಂಗಿಸ್ವಾಮಿ ಸಂಸ್ಕೃತ ಪಾಠಶಾಲೆ**<br>ಅಂಕನಹಳ್ಳಿಮಠ, ಕುಣಿಗಲ್ ತಾಲ್ಲೂಕು ತುಮಕೂರು ಜಿಲ್ಲೆ. | ಸಿ.ರಾಮಯ್ಯ | ಬಿ.ಇಡಿ<br>1989 | 17200<br>13600–26000 | 17650<br>16000–29600 |
| 35. | **ನಿರ್ವಾಣಸ್ವಾಮಿ ಸಂಸ್ಕೃತ ಪಾಠಶಾಲೆ**<br>ಶ್ರೀದೇಗುಲಮಠ, ಕನಕಪುರ | ಚಿಕ್ಕಲಿಂಗಪ್ಪ ಆರ್.ಸಿ. | ಬಿ.ಇಡಿ<br>1995 | 13300<br>11600–21000 | 13600<br>13600–26000 |
| 36. | **ಚನ್ನಮಲ್ಲಿಕಾರ್ಜುನ ಸ್ವಾಮಿ ಸಂಸ್ಕೃತ ಪಾಠಶಾಲೆ,** ಹಿರೇಕಲ್ಮಠ, ಹೊನ್ನಾಳಿ<br>ದಾವಣಗೆರೆ ಜಿಲ್ಲೆ. | ಶ್ರೀಧರ್ ಎಂ.ಆರ್. | ಬಿ.ಇಡಿ<br>1998 | 23400<br>14550–26700 | 24000<br>16000–29600 |
| 37. | **ವೈಷ್ಣವಸಭಾ ಸಂಸ್ಕೃತ ಪಾಠಶಾಲೆ**<br>ಪ್ರಕಾಶನಗರ, ಬೆಂಗಳೂರು. | ಅನಂತ ವಿ.ಆರ್. | ಬಿ.ಇಡಿ<br>1988 | 18550<br>14550–26700 | 19000<br>16000–29600 |
| 38. | **ತೋಂಟದಾರ್ಯಸಂಸ್ಕೃತ ಪಾಠಶಾಲೆ**<br>ಕುದೇರು ಮಠ, ಮೈಸೂರು. | ರಾಜಶೇಖರಯ್ಯ ಹೆಚ್. | ಬಿ.ಇಡಿ<br>1975 | 26000<br>14550–26700 | 26700<br>16000–29600 |

| | | | | | |
|---|---|---|---|---|---|
| 39. | **ಶಂಕರವಿಲಾಸ ಸಂಸ್ಕೃತ ಪಾಠಶಾಲೆ** ಮೈಸೂರು | ಜಿ.ಮಧುಮತಿ | ಬಿ.ಇಡಿ 1998 | 22800 14550–26700 | 23600 16000–29600 |
| | | ಗಣಪತಿಭಟ್ಟ ವಿ.ಎಸ್. | ಬಿ.ಇಡಿ 1996 | 26000 14550–26700 | 26700 16000–29600 |
| | | ಕೆ.ಎಂ.ನಾಗರತ್ನಮ್ಮ | ಬಿ.ಇಡಿ 1989 | 26700 14550–26700 | 27400 16000–29600 |
| 40. | **ಸದ್ಗುರು ಕಬೀರಾನಂದಸ್ವಾಮಿ ಸಂಸ್ಕೃತ ಪಾಠಶಾಲೆ**, ಕರುವಿನಕಟ್ಟೆ, ಚಿತ್ರದುರ್ಗ | ಬಿ.ಕೆ.ಸುಮನ | ಟಿ.ಸಿ.ಹೆಚ್ 1991 | 21000 14550–26700 | 21600 16000–29600 |
| 41. | **ಸಿದ್ಧಾರ್ಥ ಸಂಸ್ಕೃತ ಪಾಠಶಾಲೆ** ಗಾಂಧಿನಗರ, ಮೈಸೂರು | ಚಂದ್ರಶೇಖರ ಬಿ. | ಬಿ.ಇಡಿ 1986 | 26000 14550–26700 | 26700 16000–29600 |
| 42. | **ಸಿದ್ಧಲಿಂಗೇಶ್ವರ ಸಂಸ್ಕೃತ ಪಾಠಶಾಲೆ** ಶಿವಬಸವನಗರ, ಬೆಳಗಾವಿ | ಶ್ರೀಮತಿ ಜಯಶ್ರೀ ಕೇಳಕರ | ಬಿ.ಇಡಿ 1982 | 26000 14550–26700 | 26700 16000–29600 |
| 43. | **ಸಿದ್ಧಿವಿನಾಯಕ ಸಂಸ್ಕೃತ ಪಾಠಶಾಲೆ** ಇಡಗುಂಜಿ, ಹೊನ್ನಾವರ ತಾ|| | ಸುಬ್ರಾಯನಾಗೇಶ ಭಟ್ | ಬಿ.ಇ.ಡಿ 1994 | 21600 14550–26700 | 22200 16000–29600 |
| 44. | **ಸಿದ್ಧಾರ್ಥ ಸಂಸ್ಕೃತ ಪಾಠಶಾಲೆ** ಮಧುಗಿರಿ–572 132,ತುಮಕೂರು ಜಿ| | ರಂಗರಾಜು | ಬಿ.ಇಡಿ 1994 | 21600 14550–26700 | 22200 16000–29600 |
| 45. | **ಗೀರ್ವಾಣಭಾರತಿ ಸಂಸ್ಕೃತ ಪಾಠಶಾಲೆ** ಜೆ.ಪಿ.ನಗರ, ದೊಡ್ಡಬಳ್ಳಾಪುರ | ಬಿ.ಆರ್. ಶ್ರೀನಿವಾಸರಾವ್ | ಬಿ.ಇಡಿ 1999 | 16800 13600–26000 | 17200 16000–29600 |
| 46. | **ಸಂಸ್ಕೃತ ಪಾಠಶಾಲೆ** ಹೊಸೂರು, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ | ಪಿ. ಪಾರ್ವತಮ್ಮ | ಶಿಕ್ಷಾಶಾಸ್ತ್ರೀ 1976 | 21600 14550–26700 | 22200 16000–29600 |
| 47. | **ಪ್ರೊಗ್ರೆಸ್ಸಿವ್ ಸಂಸ್ಕೃತ ಪಾಠಶಾಲೆ** ಶಿರಸಿ, ಉತ್ತರಕನ್ನಡ ಜಿಲ್ಲೆ | ರಾಮಚಂದ್ರ ತಿಮ್ಮಪ್ಪಭಟ್ಟ | ಶಿಕ್ಷಾಶಾಸ್ತ್ರೀ 1994 | 16000 12500–24000 | 16400 14550–26700 |
| 48. | **ಶ್ರೀಮನ್ನಿರಂಜನ ಜಗದ್ಗುರು ತೋಂಟದಾರ್ಯ ಸಂಸ್ಕೃತ ಪಾಠಶಾಲೆ** ಗದಗ | ಎಂ.ಎಸ್. ಅಂಗಡಿ | ಬಿ.ಇಡಿ 1991 | 24000 14550–26700 | 24600 16000–29600 |
| 49. | **ಉಜ್ಜಯಿನಿ ಜಗದ್ಗುರು ಸಿದ್ದೇಶ್ವರ ಸಂಸ್ಕೃತ ಪಾಠಶಾಲೆ**, ಬಂಡಿಮೋಟ, ಬಳ್ಳಾರಿ | ಚಂದ್ರಶೇಖರಯ್ಯ ಹಿರೇಮಠ | ಬಿ.ಇಡಿ 1998 | 22200 14550–26700 | 22800 16000–29600 |
| 50. | **ಸುಜಾತ ಸಂಸ್ಕೃತ ಪಾಠಶಾಲೆ** ಸರ್.ಎಂ.ವಿ. ಬಡಾವಣೆ, ಉಲ್ಲಾಳು ಉಪನಗರ, ಬೆಂಗಳೂರು | ಜಿ. ಶಾಂತ | ಬಿ.ಇಡಿ 1996 | 22200 14550–26700 | 22800 16000–29600 |
| 51. | **ಸಂಸ್ಕೃತ ವೇದ ಪಾಠಶಾಲೆ** ಚಿದಂಬರಾಶ್ರಮ, ಗುಬ್ಬಿ | ಲಕ್ಷ್ಮೀ | ಬಿ.ಇಡಿ 2000 | 17200 13600–26000 | 17650 16000–29100 |

ನಿರ್ಣಯ: **ಸಭೆಯು ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿ ಬಿ.ಇಡಿ, ಡಿ.ಇಡಿ ಹಾಗೂ ಶಿಕ್ಷಾಶಾಸ್ತ್ರಿ ತರಬೇತಿ ಹೊಂದಿದ ಶಿಕ್ಷಕರನ್ನು ಮಾತ್ರ ತರಬೇತಿ ವೇತನಶ್ರೇಣಿಗೆ ಪರಿಗಣಿಸಬಹುದಾಗಿದ್ದು, ಉಳಿದಂತೆ ಹಿಂದೀಶಿಕ್ಷಕ್, ಚಿತ್ರಕಲಾ, ಬಿ.ಪಿ.ಎಡ್. ಹಾಗೂ ಸಿ.ಪಿ.ಇಡಿ. ತರಬೇತಿ ಹೊಂದಿದ ಶಿಕ್ಷಕರು ತರಬೇತಿ ವೇತನಶ್ರೇಣಿಗೆ ಅರ್ಹರಿರುವುದಿಲ್ಲ. ಆದ ಕಾರಣ ಬಿ.ಇಡಿ, ಡಿ.ಇಡಿ ಹಾಗೂ ಶಿಕ್ಷಾಶಾಸ್ತ್ರಿ ತರಬೇತಿ ಹೊಂದಿದ 60 ಶಿಕ್ಷಕರಿಗೆ ತರಬೇತಿ ವೇತನಶ್ರೇಣಿ ನಿಗದಿಪಡಿಸಲು ಸಭೆಯು ಒಪ್ಪಿಗೆ ನೀಡಿತು.**

**ವಿದ್ವಾನ್ ಪಿ.ಆರ್. ಪಾಗೋಜಿ**
ಸದಸ್ಯ ಕಾರ್ಯದರ್ಶಿ

**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ**
ಅಧ್ಯಕ್ಷರು